ಸವದತ್ತಿ ತಾಲ್ಲೂಕಿನ ಹಿರೇಬಿದನೂರು ಹಾಗೂ ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಗ್ರಾಮಗಳಲ್ಲಿ ಆಶ್ರಮ ಶಾಲೆಗಳು.

323(3118)

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ(ಬೈಲಹೊಂಗಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂ ಜಿಲ್ಲೆಯಲ್ಲಿ ಎಷ್ಟು ಆಶ್ರಮ ಶಾಲೆಗಳು ಇವೆ; (ತಾಲ್ಲೂಕುವಾರು ವಿವರ ನೀಡುವುದು).

ಆ) ಪರಿಶಿಷ್ಟ ಪಂಗಡ ಹಾಗೂ ಪರಿಶಿಷ್ಟ ವರ್ಗದವರು ವಾಸಿಸುವ ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಿರೇಬಿದನೂರು ಹಾಗೂ ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಗ್ರಾಮಗಳಲ್ಲಿ ಆಶ್ರಮ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು):

ಅ) ಬೆಳಗಾಂ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ವರ್ಗದವರಿಗಾಗಿ ಒಂದು ಆಶ್ರಮ ಶಾಲೆ ಇರುತ್ತದೆ.

ತಾಲ್ಲೂಕು	ಆಶ್ರಮ ಶಾಲೆ
ಅಥಣಿ ತಾಲ್ಲೂಕು	ಯಕ್ಕಂಚಿ

ಆ) ಜಿಲ್ಲೆಯಿಂದ ಸವದತ್ತಿ ತಾಲ್ಲೂಕಿನ ಹಿರೇಬಿದನೂರು ಹಾಗೂ ಬೈಲಹೊಂಗಲ ತಾಲ್ಲೂಕಿನ ವಣ್ಣೂರ ಗ್ರಾಮಗಳಲ್ಲಿ ಆಶ್ರಮ ಶಾಲೆಗಳನ್ನು ಪ್ರಾರಂಭಿಸಲು ಸೂಕ್ತ ಪ್ರಸ್ತಾವನೆಗಳು ಬಂದಲ್ಲಿ ಪರಿಶೀಲಿಸಲಾಗುವುದು.

ANNEXURE

TALUK-WISE DETAILS OF SCHEDULED CASTE/ BACKWARD CLASSES HOSTELS IN MANDYA DIST.

Sl. No.	Taluk	Scheduled Caste hostels.	Backward Class hostels.
1.	Mandya	10	13
2.	Maddur	8	11
3.	Srirangapatna	5	7
4.	K.R.Pet	6	5
5.	Nagamangala	5	6
6.	Malavalli	14	9
7.	Pandavapura	4	5
	Total	52	56

ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ: ಸನ್ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಒಂದು ಹೊಸ ಆಶ್ರಮ ಶಾಲೆಯನ್ನು ಪ್ರಾರಂಭ ಮಾಡಬೇಕೆಂದು ಕೇಳುತ್ತೇನೆ. ಇದಕ್ಕೆ ನಿಮ್ಮ ಸರ್ಕಾರ ಅನುಸರಿಸುತ್ತಿರುವ ಒಂದು ಮಾನದಂಡ ಏನು ಎಂದು ನಾನು ಕೇಳುತ್ತಿದ್ದೇನೆ. ಆ ಮಾನದಂಡವನ್ನು ಅನುಕರಣೆ ಮಾಡಿದರೆ, ನಮ್ಮ ಜಿಲ್ಲೆಯಲ್ಲಿ ಆಶ್ರಮ ಶಾಲೆಗಳನ್ನು ಪ್ರಾರಂಭ ಮಾಡಬಹುದೇ? ನಮ್ಮ ಬೆಳಗಾಂ ಜಿಲ್ಲೆ ಅತ್ಯಂತ ದೊಡ್ಡ ಜಿಲ್ಲೆಯಾಗಿದೆ. ಇಡೀ ಜಿಲ್ಲೆಯಲ್ಲಿ ಕೇವಲ ಒಂದೇ ಒಂದು ಆಶ್ರಮ ಶಾಲೆ ಇದೆ. ನನ್ನ ಮತಕ್ಷೇತ್ರದಲ್ಲಿ ಹಿರೇಬಿದನೂರು ಹಾಗೂ ವಣ್ಣೂರ ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಜನರು ಹೆಚ್ಚಿಗೆ ಇರುವುದರಿಂದ ಅಲ್ಲಿಗೆ ಒಂದು ಹೊಸ ಆಶ್ರಮ ಶಾಲೆಯನ್ನು ಸರ್ಕಾರದವರು ಪ್ರಾರಂಭಿಸುತ್ತಾರೆಯೇ ಎಂದು ನಾನು ತಮ್ಮ ಮೂಲಕ ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಈ ಆಶ್ರಮ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಇರತಕ್ಕಂಥ ಒಂದು ಮಾನದಂಡವೆಂದು ಹೇಳಿದರೆ, ವಿಶೇಷವಾಗಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ಜನರ ಮಕ್ಕಳಿಗೆ 1 ರಿಂದ ನಾಲ್ಕನೇ ತರಗತಿಯವರೆಗೆ ಓದತಕ್ಕಂಥವರಿಗೆ ಓದುವುದಕ್ಕೆ ಅನುಕೂಲ ಇಲ್ಲದೇ ಹೋದರೆ, ದೂರದ ಪ್ರದೇಶಗಳಲ್ಲಿ ಶಾಲೆ ಇದ್ದು ಅನಾನುಕೂಲವಾಗುತ್ತಿದ್ದರೆ, ಅಂತಹ ಸಂದರ್ಭದಲ್ಲಿ ನಾವು ಪ್ರಾರಂಭ ಮಾಡತಕ್ಕಂಥ ಒಂದು ಮಾನದಂಡವನ್ನು ಇಟ್ಟುಕೊಂಡಿದ್ದೇವೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಅದು ದೊಡ್ಡ ಜಿಲ್ಲೆ ಅದನ್ನು ನಾನೂ ಕೂಡ ಒಪ್ಪುತ್ತೇನೆ, ಅಲ್ಲಿ ಪರಿಶಿಷ್ಟ ಜಾತಿಯ ಜನರು ಕೂಡ ಇದ್ದಾರೆ. ಎಲ್ಲಿ ಅಂತಹ ಬೇಡಿಕೆ ಇದೆ ಎನ್ನುವುದು ಬಂದರೆ, ಅಥವಾ ಹೆಚ್ಚಿನ ಸಂಖ್ಯೆಯ ಪರಿಶಿಷ್ಟ ಜಾತಿಯ ಜನರು ಇದ್ದರೆ, ನಾನು ಇಲಾಖೆಯ ಮುಖಾಂತರ ಬೆಳಗಾಂ ಜಿಲ್ಲೆಯಲ್ಲಿ ಆಶ್ರಮ ಶಾಲೆಗಳನ್ನು ಮಾಡುವುದಕ್ಕೆ ಎಲ್ಲೆಲ್ಲಿ ಅಗತ್ಯವಿದೆ ಎಂಬ ಬಗ್ಗೆ ನಾನು ಪರಿಶೀಲನೆ ಮಾಡಿ, ಅಗತ್ಯ ಇರತಕ್ಕಂಥ ಕಡೆಗಳಲ್ಲಿ ಹಣದ ಮಿತಿಯನ್ನು ನೋಡಿಕೊಂಡು ಅದನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎನ್.ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ ನಾಗಮಂಗಲ ತಾಲ್ಲೂಕಿನ ಕೋಟಾಬೆಟ್ಟದಲ್ಲಿ ಮಂಜೂರಾಗಿದ್ದು ಶಾಲೆಗೆ ಒಂದು ವರ್ಷದ ಹಿಂದೆಯೇ ಜಾಗವನ್ನು ಕೊಟ್ಟಿದ್ದು, ಎರಡು ವರ್ಷದಿಂದ ಶಾಲೆಯು ಪ್ರಾರಂಭವಾಗಿದೆ. ಅದಕ್ಕೆ ಹಣ ಕೂಡ ಬಿಡುಗಡೆಯಾಗಿದೆ. ಈಗ ಲ್ಯಾಂಡ್ ಆರ್ಮಿಗೆ ಕೊಟ್ಟಿರುವುದನ್ನು ವಿತ್‌ಡ್ರಾ ಮಾಡಿ, ಸರ್ಕಾರದಿಂದ ಬೇರೆ ಏಜೆನ್ಸಿಯವರನ್ನು ಫಿಕ್ಸ್ ಮಾಡಲಾಗುವುದೆಂದು ಹೇಳಿ ಅಲ್ಲಿಯವರೆಗೆ ಲ್ಯಾಂಡ್ ಆರ್ಮಿಯವರಿಗೆ ಕೆಲಸವನ್ನು ಮಾಡಬಾರದೆಂದು ನಿರ್ದೇಶನವನ್ನು ಕೊಟ್ಟಿದ್ದಾರೆ. ಆದ್ದರಿಂದ ದಯಮಾಡಿ ಮಾನ್ಯ ಸಚಿವರು ಬೇರೆ ರೀತಿಯ ನಿರ್ದೇಶನ ಕೊಟ್ಟು ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಅನುವು

ಮಾಡಿಕೊಡಬೇಕು. ಅಥವಾ ಲ್ಯಾಂಡ್ ಆರ್ಮಿಯವರೆ ಆ ಕೆಲಸವನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಾವು ಆದೇಶವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಸನ್ಮಾನ್ಯ ಅಧ್ಯಕ್ಷರೆ, ಈಗ ಅದನ್ನು ನಾವು ಲ್ಯಾಂಡ್ ಆರ್ಮಿಗೆ ವಹಿಸಿಕೊಟ್ಟಿದ್ದರೆ ಅವರ ಮುಖಾಂತರವೇ ಆ ಕೆಲಸವನ್ನು ಪೂರ್ಣಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೆಲಸವನ್ನು ಅವರಿಗೆ ವಹಿಸಿರುವುದರಿಂದ ಅವರ ಮುಖಾಂತರವೇ ಮಾಡಿಸಬೇಕಾಗುತ್ತದೆ. ಕೆಲವು ಕಡೆ ಲ್ಯಾಂಡ್ ಆರ್ಮಿಯವರಿಂದ ಒಳ್ಳೆಯ ಕೆಲಸವಾಗುತ್ತಿಲ್ಲವೆಂದು ದೂರುಗಳು ಬರುತ್ತಿವೆ, ಅಂತಹ ಕಡೆಗಳಲ್ಲಿ ಬದಲಾವಣೆ ಮಾಡುವ ಪ್ರಯತ್ನವನ್ನು ಮಾಡುತ್ತೇವೆ. ಲ್ಯಾಂಡ್ ಆರ್ಮಿಯವರು ಎಲ್ಲಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ ಅವರ ಮುಖಾಂತರವೇ ಮಾಡಿಸುವ ಪ್ರಯತ್ನವನ್ನು ಮಾಡುತ್ತೇವೆ.

ರಾಜ್ಯದಲ್ಲಿರುವ ನಗರಸಭೆಗಳು.

324(3124)

ಶ್ರೀ ಚನ್ನಿಗಪ್ಪ ಸಿ.(ಕೊರಟಗೆರೆ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಗರಸಭೆಗಳ ಸಂಖ್ಯೆ ಎಷ್ಟು?

ಆ) ಬೆಂಗಳೂರಿನ ಟಿ.ದಾಸರಹಳ್ಳಿ ನಗರಸಭೆಗೆ ಸರ್ಕಾರದ ವತಿಯಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನವೆಷ್ಟು; ಈ ಅನುದಾನದಿಂದ ಕಾಮಗಾರಿಯನ್ನು ಸಕಾಲದಲ್ಲಿ ಮುಗಿಸಲಾಗಿದೆಯೆ; ಇಲ್ಲದಿದ್ದಲ್ಲಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರವು ಕೈಗೊಳ್ಳುವ ಕ್ರಮ ಯಾವುದು;

ಇ) ರಾಜ್ಯದ ಎಲ್ಲಾ ನಗರಸಭೆಗಳಿಂದ ವಸೂಲಿಯಾದ ಸಾರ್ವಜನಿಕ ವಂತಿಕೆ ಎಷ್ಟು; ಈ ವಂತಿಕೆಯಿಂದ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ; ವಿವರ ಒದಗಿಸುವುದು;

ಶ್ರೀ ಎಂ.ಮಲ್ಲಿಕಾರ್ಜುನನಾಗಪ್ಪ(ಪೌರಾಡಳಿತ ರಾಜ್ಯ ಸಚಿವರು)

ಅ) ೪೦